ಆಗ ಸೆರೆನಾ ಪಟ್ಟ ಪಾಡು ಏನು ಎಂಬುದು ಎಲ್ಲರಿಗೂ ಗೊತ್ತಾಗಿತ್ತು.

'ಕನ್ನಡಿಯ ಮುಂದೆ ನಿಂತು ಪ್ರತಿಬಾರಿ ನನ್ನ ದೇಹ ನೋಡಿದಾಗ ಮೈಕಟ್ಟಿನ ಬಗ್ಗೆ, ದೇಹದ ಬಣ್ಣದ ಬಗ್ಗೆ ಕೀಳರಿಮೆ ಉಂಟಾಗುತ್ತಿತ್ತು. ಎದೆಯ ಮತ್ತು ತೊಡೆಗಳ ಭಾಗ ತುಂಬಾ ದಪ್ಪವಾಗಿದೆ ಎಂದೆನಿಸುತ್ತಿತ್ತು. ದೇಹವನ್ನು ಸಹಜ ಸ್ಥಿತಿಗೆ ತರಲು ಎಷ್ಟೇ ಪ್ರಯತ್ನ ಮಾಡಿದರೂ ಸಾಧ್ಯವಾಗಲಿಲ್ಲ. ಅದೆಷ್ಟೋ ಬಾರಿ ಹುಡುಗಿಯರೇ ನನ್ನನ್ನು ಸರಿಯಾಗಿ ಮಾತನಾಡಿಸುತ್ತಿರಲಿಲ್ಲ. ಆದ್ದರಿಂದ ಈ ವೇಳೆ ನನ್ನ ಕೈ ಹಿಡಿದದ್ದು ಟೆನಿಸ್. ಈ ಕ್ರೀಡೆಯಲ್ಲಿ ಎತ್ತರದ ಸಾಧನೆ ಮಾಡಿದ್ದರಿಂದಲೇ ನನ್ನ ಬೆತ್ತಲೆ ದೇಹಕ್ಕೂ ಬೇಡಿಕೆ ಉಂಟಾಯಿತು' ಎಂದು ಮನದ ನೋವನ್ನು ತೋಡಿಕೊಂಡಿದ್ದರು.

ಸೆರೆನಾ 2009ರಲ್ಲಿ ನಿಯತಕಾಲಿಕೆಯೊಂದರ ಮುಖಪುಟಕ್ಕೆ ತಮ್ಮ ದೇಹಸಿರಿ ಪ್ರದರ್ಶಿಸಿದ್ದರು. ಟೆನಿಸ್‌ನಲ್ಲಿ ಹಲವು ಪ್ರಶಸ್ತಿಗಳನ್ನು ಗೆಲ್ಲುವುದಕ್ಕೂ ಮೊದಲು ಅವರಿಗೆ ಜಾಹೀರಾತು ಮಾರುಕಟ್ಟೆಯಲ್ಲಿ ಮೌಲ್ಯವಿರಲಿಲ್ಲ. ಇದಕ್ಕೆ ಅವರ ಬಣ್ಣ ಮತ್ತು ಮೈಕಟ್ಟು ಕೂಡ ಕಾರಣವಾಗಿರಬಹುದು. ಯಾವಾಗ ಒಂದಾದ ಮೇಲೊಂದರಂತೆ ಟ್ರೋಫಿ ಗೆಲ್ಲಲು ಆರಂಭಿಸಿದರೋ, ಅವರನ್ನು ನೋಡುವ ದೃಷ್ಟಿಕೋನ ಬದಲಾಗಿ ಹೋಯಿತು. ಈಗ ಜಾಹೀರಾತಿನಿಂದಲೇ ಕೋಟಿಗಟ್ಟಲೆ ಹಣ ಸಂಪಾದಿಸುತ್ತಿದ್ದಾರೆ. ಹಲವಾರು ಫ್ಯಾಷನ್ ಶೋ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದಾರೆ.

### ಮಗಳ ಯಶಸ್ಸಿನ ಹಿಂದೆ ಅಪ್ಪ

ಕ್ಯಾಲಿಫೋರ್ನಿಯಾದ ಕಾಂಪ್ಟನ್‌ನವರಾದ ಸೆರೆನಾ ಯಶಸ್ಸಿನಲ್ಲಿ ಅವರ ತಂದೆಯ ಪಾತ್ರವೇ ಹೆಚ್ಚಿದೆ. ಚೆಂಡನ್ನು ಖರೀದಿಸಲೂ ಸಾಧ್ಯವಿಲ್ಲದಂತಹ ಬಡತನವಿತ್ತು. ಅದಕ್ಕಾಗಿ ಅವರ ತಂದೆ ರಿಚರ್ಡ್ ಸ್ಥಳೀಯ ಕ್ಲಬ್‌ಗಳಲ್ಲಿ ಕಾಡಿ, ಬೇಡಿ ಚೆಂಡನ್ನು ತಂದುಕೊಡುತ್ತಿದ್ದರು. ಆದರೂ ಸೆರೆನಾ ಮತ್ತು ವೀನಸ್ ವಿಲಿಯಮ್ಸ್ ಅವರಿಗೆ ಆಡಲು ಅವಕಾಶಗಳೇ ಸಿಗುತ್ತಿರಲಿಲ್ಲ. 'ಈ ಕಪ್ಪು ಹುಡುಗಿಯರಿಗೆ ಟೆನಿಸ್ ಆಡಲು ಮಾತ್ರ ಅವಕಾಶವೇ ಕೊಡಬಾರದು. ಬೇರೆ ಏನನ್ನಾದರೂ ಮಾಡಿಕೊಂಡಿರಲಿ ಎಂದು ಸುತ್ತಲಿನವರು ಹೀಯಾಳಿಸುತ್ತಿದ್ದರು. ಅವಮಾನ ನುಂಗಿ, ಇದರ ನಡುವೆಯೇ ಸಾಧನೆ ಮಾಡುವುದನ್ನೇ ಬಿಟ್ಟರೆ ಬೇರೆ ಹಾದಿ ನಮ್ಮ ಮುಂದೆ ಇರಲಿಲ್ಲ. ಮಕ್ಕಳು ಬಾಲ್ಯದಲ್ಲಿದ್ದಾಗ ವರ್ಣಭೇದದ ನಡುವೆಯೂ ಬದುಕು ಸಾಗಿಸಿದರು. ಆದರೆ ಮಕ್ಕಳ ಈಗಿನ ಸಾಧನೆ ನನ್ನೆಲ್ಲಾ ನೋವನ್ನು ಮರೆಸಿದೆ' ಎಂದು ಸೆರೆನಾ ತಂದೆ ರಿಚರ್ಡ್ ಹೇಳುತ್ತಾರೆ.



ಸ್ಟೆಫಿಗ್ರಾಫ್

ಸೆರೆನಾ ಅವರ ಅಕ್ಕ ವೀನಸ್ ವಿಲಿಯಮ್ಸ್ ಸಾಧನೆ ಕೂಡ ಸಣ್ಣದೇನಲ್ಲ. ವಿಂಬಲ್ಡನ್ ಟೂರ್ನಿಯ ಸಿಂಗಲ್ಸ್‌ನಲ್ಲಿ ಐದು ಬಾರಿ ಮತ್ತು ಅಮೆರಿಕ ಓಪನ್‌ನಲ್ಲಿ ಎರಡು ಸಲ ಪ್ರಶಸ್ತಿ ಗೆದ್ದಿದ್ದಾರೆ. ಡಬಲ್ಸ್‌ನಲ್ಲಿ 14 ಟ್ರೋಫಿಗಳ ಒಡತಿಯಾಗಿದ್ದಾರೆ. ಈ ಸಹೋದರಿಯರ ಸುಂದರ ಆಟ ಟೆನಿಸ್ ಕ್ರೀಡೆಯ ಸೊಬಗು ಹೆಚ್ಚಿಸಿದೆ. ಜನ ಹೆಚ್ಚು ಪಂದ್ಯಗಳನ್ನು ನೋಡುವಂತೆ ಮಾಡಿದೆ.

### ಯಾರು ಶ್ರೇಷ್ಠ?

ಹೋದ ತಿಂಗಳು ಸೆರೆನಾ ಅವರು ಸ್ಟೆಫಿ ಗ್ರಾಫ್ ದಾಖಲೆ ಅಳಿಸಿ ಹಾಕಿದಾಗ ಇವರಲ್ಲಿ ಯಾರು ಶ್ರೇಷ್ಠ ಎನ್ನುವ ವಿಷಯವೂ ಟೆನಿಸ್ ವಲಯದಲ್ಲಿ ಸಾಕಷ್ಟು ಚರ್ಚೆಗೆ ಕಾರಣವಾಯಿತು.

ಸೆರೆನಾ ಪಾದರಸದ ವೇಗದಲ್ಲಿ ಓಡುವ ರೀತಿ, ಎದುರಾಳಿ ಸ್ಪರ್ಧಿಯ ಚಾಣಾಕ್ಷ ಆಟಕ್ಕೆ ತಕ್ಕ ತಿರುಗೇಟು ನೀಡುವ ಛಲ, ಬ್ಯಾಕ್‌ಹ್ಯಾಂಡ್



ಹೊಡೆತಗಳ ಸೊಬಗು ಅವರ ಆಟದ ಸೌಂದರ್ಯವನ್ನು ಹೆಚ್ಚಿಸಿದೆ. ದೀರ್ಘ ರ್‍ಯಾಲಿಗಳನ್ನು ಸಿಡಿಸುವುದು, ಅನಗತ್ಯ ತಪ್ಪುಗಳನ್ನು ಕಡಿಮೆ ಮಾಡುವುದು, ಪ್ರಬಲ ಏಸ್‌ಗಳನ್ನು ಹೊಡೆಯುವುದು, ಮ್ಯಾರಥಾನ್ ಸವಾಲಿಗೆ ಎದೆಯೊಡ್ಡುವುದು ಅವರ ಆಟದ ಶಕ್ತಿ. ಆದ್ದರಿಂದ ಸೆರೆನಾ ಆಟವನ್ನು ಸ್ಟೆಫಿ ಗ್ರಾಫ್‌ಗೆ ಹೋಲಿಸಲಾಗುತ್ತಿದೆ.

ಜರ್ಮನಿಯ ಸ್ಟೆಫಿ ಗ್ರಾಫ್ 1980–90ರ ದಶಕದಲ್ಲಿ ಟೆನಿಸ್ ಲೋಕದ ರಾಣಿಯಾಗಿ ಮೆರೆದವರು. ಆದ್ದರಿಂದಲೇ ಖ್ಯಾತ ಟೆನಿಸ್ ಬರಹಗಾರ ಸ್ಟೀವ್ ಫಿಂಕ್ 'ಸ್ಟೆಫಿ 20ನೇ ಶತಮಾನದ ಶ್ರೇಷ್ಠ ಆಟಗಾರ್ತಿ' ಎಂದು ತಮ್ಮ 'ದ ಗ್ರೇಟ್ ಟೆನಿಸ್ ಮ್ಯಾಚ್ ಆಫ್ ದ ಟ್ವೆಂಟಿಯತ್ ಸೆಂಚೂರಿ' ಪುಸ್ತಕದಲ್ಲಿ ಬಣ್ಣಿಸಿದ್ದಾರೆ. 18ನೇ ವಯಸ್ಸಿನಲ್ಲಿ ಮೊದಲ ಗ್ರ್ಯಾಂಡ್ ಸ್ಲಾಮ್ ಟ್ರೋಫಿ ಗೆದ್ದ ಸ್ಟೆಫಿ ಗ್ರಾಫ್ ಒಂದೇ ವರ್ಷದಲ್ಲಿ (1988) ನಾಲ್ಕೂ ಗ್ರ್ಯಾಂಡ್ ಸ್ಲಾಮ್ ಟೂರ್ನಿಗಳ ಸಿಂಗಲ್ಸ್‌ನಲ್ಲಿ ಚಾಂಪಿಯನ್ ಆಗಿದ್ದರು.

ಸೆರೆನಾ ಮತ್ತು ಸ್ಟೆಫಿ ಗ್ರಾಫ್ ಅವರ ಆಟಕ್ಕೆ ಹೋಲಿಸಿದರೆ ಇಬ್ಬರದೂ ಭಿನ್ನವಾದ ಶೈಲಿಯೇ. ಸ್ಟೆಫಿ ಹುಲ್ಲಿನ, ಜೇಡಿಮಣ್ಣಿನ ಮತ್ತು ಗಟ್ಟಿಯಾದ ಈ ಮೂರೂ ಅಂಕಣಗಳಲ್ಲಿ ಆಡಿ ಮೆರೆದವರು.

ಮಿಂಚಿನ ವೇಗ, ಇನ್ ಸೈಡ್, ಔಟ್ ಫೋರ್‌ಹ್ಯಾಂಡ್ ಹೊಡೆತಗಳಿಗೆ ಹೆಸರುವಾಸಿಯಾಗಿದ್ದವರು. ಆದ್ದರಿಂದ ಅವರನ್ನು 'ಫ್ರಾಲಿನ್ ಫೋರ್‌ಹ್ಯಾಂಡ್' ಎಂದು ಕರೆಯಲಾಗುತ್ತಿತ್ತು. ಬ್ಯಾಕ್‌ಹ್ಯಾಂಡ್ ಮೂಲೆಯ ಅಂಚಿನಲ್ಲಿ ನಿಂತೇ ಎದುರಾಳಿಯ ಸವಾಲಿಗೆ ದಿಟ್ಟ ಉತ್ತರ ಕೊಡುತ್ತಿದ್ದರು. ಬೇಸ್‌ಲೈನ್‌ನಲ್ಲಿ, ಟೆನಿಸ್ ಅಂಕಣದ ಪರಿಧಿಯ ಬಳಿ ಚೆಂಡನ್ನು ನಿಖರವಾಗಿ ಎದುರಾಳಿ ಅಂಕಣಕ್ಕೆ ಹಿಂತಿರುಗಿಸುತ್ತಿದ್ದ ಚಾಕಚಕ್ಯತೆ ಪಂದ್ಯ ಜಯಿಸಲು ಪ್ರಮುಖ ಅಸ್ತ್ರವಾಗುತ್ತಿತ್ತು. ಅತ್ಯಂತ ಕರಾರುವಾಕ್ಕಾದ ಸರ್ವ್‌ಗಳನ್ನು ಮಾಡುವಲ್ಲಿಯೂ ಸ್ಟೆಫಿ ನಿಪುಣರಾಗಿದ್ದರು.

ಆದರೆ ಸ್ಟೆಫಿ ಗ್ರಾಫ್ ಆಡುತ್ತಿದ್ದ ದಿನಗಳಿಗೂ ಈಗಿನ ಟೆನಿಸ್‌ಗೂ ಸಾಕಷ್ಟು ವ್ಯತ್ಯಾಸವಿದೆ. ಟೆನಿಸ್ ಅಂಕಣದ ಗುಣಮಟ್ಟವೂ ಹೆಚ್ಚಿದೆ. ಅಷ್ಟೇ ಸ್ಪರ್ಧೆಯೂ ಇದೆ. ಸೆರೆನಾ ಅವರು ಮರಿಯಾ ಶರಪೋವಾ, ಕ್ಯಾರೊಲಿನ್ ವೋಜ್ನಿಯಾಕಿ, ವೀನಸ್ ವಿಲಿಯಮ್ಸ್, ಅನಾ ಇವಾನೊವಿಕ್, ಆ್ಯಂಜಲಿಕ್ ಕೆರ್ಬರ್, ವಿಕ್ಟೋರಿಯಾ ಅಜರೆಂಕಾ, ಸಿಮೊನಾ ಹಲೆಪ್– ಹೀಗೆ ಬಲಿಷ್ಠ ಆಟಗಾರ್ತಿಯರ ಕಠಿಣ ಸವಾಲನ್ನು ಎದುರಿಸಿ ಪ್ರಶಸ್ತಿ ಜಯಿಸಿದ್ದಾರೆ. ಸ್ಟೆಫಿ ಗ್ರಾಫ್ ಕೂಡ ಅವರ ಕಾಲದ ಬಲಿಷ್ಠ ಆಟಗಾರ್ತಿಯರೆನಿಸಿದ್ದ ಅಮೆರಿಕದ ಕ್ರಿಸ್ ಎವರ್ಟ್, ಮಾರ್ಟಿನಾ ನವ್ರಟಿಲೋವಾ, ಮೇರಿ ಜಾಯ್ ಫೆರ್ನಾಂಡೀಸ್, ಜೆಕ್ ಗಣರಾಜ್ಯದ ಜಾನಾ ನೊವಾಟ್ನಾ ಹೀಗೆ ಅನೇಕರ ಸವಾಲುಗಳನ್ನು ಎದುರಿಸಿ ವೃತ್ತಿ ಜೀವನದಲ್ಲಿ ಒಟ್ಟು 107 ಪ್ರಶಸ್ತಿಗಳನ್ನು ಸಂಪಾದಿಸಿದ್ದಾರೆ. ಸಮ ಸಾಮರ್ಥ್ಯ, ಎಲ್ಲರೂ ಮೆಚ್ಚುವಂಥ ಸಾಧನೆ ಮಾಡಿರುವ ಸೆರೆನಾ ಮತ್ತು ಸ್ಟೆಫಿ ಗ್ರಾಫ್ ಇಬ್ಬರೂ ಟೆನಿಸ್ ಕ್ಷಿತಿಜದಲ್ಲಿ ಸದಾ ಮಿನುಗುವ ತಾರೆಗಳಾಗಿ ಉಳಿಯುತ್ತಾರೆ. ■